**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.377/2023**

**PW-3 CW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಾಘವೇಂದ್ರ ತಂದೆ ಬೂದೆಪ್ಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣೀಕರಿಸಿದ ದಿನಾಂಕ | ಃ | 16-01-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಮೇ 2015 ರಿಂದ 2019 ರ ವರೆಗೆ ಗಬ್ಬೂರು ಪೊಲೀಸ ಠಾಣೆಯಲ್ಲಿ ಪೊಲೀಸ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03-08-2017 ರಂದು ಚಾಸಾ-1 ಪಿಎಸ್ಐ ಟಿ. ರಾಮಣ್ಣ ಇವರ ಸೂಚನೆಯಂತೆ ನಾನು ಹಾಗೂ ಚಾಸಾ-5 ಇಸ್ಮಾಯಿಲ್ ಇವರು ಚಾಸಾ-2 ಮತ್ತು 3 ಪಂಚರನ್ನು ಕರೆದುಕೊಂಡು ಠಾಣೆಗೆ ಬಂದಿರುತ್ತೇವೆ. ನಂತರ ಬೆಳಿಗ್ಗೆ 7-30 ರ ಸುಮಾರಿಗೆ ದಾಳಿಗಾಗಿ ಚಾಸಾ-1 ರವರೊಂದಿಗೆ ನಾವು ಹೋಗಿರುತ್ತೇವೆ. ಮುಷ್ಟೂರು ಕ್ರಾಸ್ ಬಳಿ ನಿಂತು ಪರಿಶೀಲನೆ ಮಾಡುತ್ತಿದ್ದಾಗ ದೇವದುರ್ಗ ಕಡೆಯಿಂದ ಕೆಎ-36-ಎ-4135 407 ವಾಹನ ಬರುತ್ತಿದ್ದು ಅದನ್ನು ತಡೆದು ನಿಲ್ಲಿಸಿ ಪರಿಶೀಲನೆ ಮಾಡಲಾಗಿ 48 ಗೋಣಿಚೀಲಗಳಲ್ಲಿ ಹಾಗೂ 55 ಪ್ಲಾಸ್ಟಿಕ್ ಚೀಲಗಳಲ್ಲಿ ಒಟ್ಟು 103 ಚೀಲಗಳಲ್ಲಿ ಅಕ್ಕಿ ಸಾಗಾಟ ಮಾಡುತ್ತಿರುವುದು ಕಂಡುಬಂದಿದ್ದು ನಾವು ವಾಹನ ತಪಾಸಣೆ ಮಾಡುವ ಸಮಯದಲ್ಲಿ ಆರೋಪಿ ವಾಹನ ಬಿಟ್ಟು ಓಡಿ ಹೋಗಿರುತ್ತಾನೆ. ಸ್ಥಳದಲ್ಲಿ ಬೆಳಿಗ್ಗೆ 8-30 ರಿಂದ 10-30 ರ ಅವಧಿಯಲ್ಲಿ ಪಂಚನಾಮೆಯನ್ನು ಮಾಡಿರುತ್ತೇವೆ. ನಂತರ ಮಾಲು ಸಮೇತ ಚಾಸಾ-1 ರವರು ಠಾಣೆಗೆ ಬಂದಿರುತ್ತೇವೆ. ಸದರಿ ಅಕ್ಕಿ ಸಾರ್ವಜನಿಕರಿಗೆ ಪಡಿತರ ಚೀಟಿ ಮೂಲಕ ಹಂಚುವ ಅಕ್ಕಿ ಆಗಿರುತ್ತದೆ. ಸದರಿ ಅಕ್ಕಿಯನ್ನು ತಮ್ಮ ಲಾಭಕ್ಕಾಗಿ ಅಕ್ರಮವಾಗಿ ಕಳ್ಳತನದಿಂದ ಸಾಗಾಟ ಮಾಡುತ್ತಿದ್ದರು. ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಪಿ ವಕೀಲರಿಂದ.**

ಗಬ್ಬೂರಿನ ಹೊಸ ಬಸಸ್ಟ್ಯಾಂಡ ಹತ್ತಿರ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಕರೆದುಕೊಂಡು ಬಂದಿರುತ್ತೇವೆ. ಮೊದಲು ಪಂಚರನ್ನು ಠಾಣೆಗೆ ಕರೆದುಕೊಂಡು ಹೋಗಿ ನಂತರ ದಾಳಿಗೆ ಹೋಗಿರುತ್ತೇವೆ. ನಾವು ದಾಳಿಗೆ ಒಟ್ಟು 05 ಜನ ಹೋಗಿರುತ್ತೇವೆ. ದಾಳಿಯ ಪೂರ್ವದಲ್ಲಿ ನಮ್ಮಗಳ ಅಂಗ ಶೋಧನೆ ಪಂಚನಾಮೆ ಮಾಡಿರುವುದಿಲ್ಲ. ಠಾಣೆಯಿಂದ ಬೆಳಿಗ್ಗೆ 7-30 ಕ್ಕೆ

ಹೊರಟಿರುತ್ತೇವೆ. ಸ್ಥಳಕ್ಕೆ ಅಂದಾಜು 8-00 ಗಂಟೆಯ ಸುಮಾರಿಗೆ ಹೋಗಿರುತ್ತೇವೆ. ಮುಷ್ಟೂರು ಕ್ರಾಸ್‌ನಲ್ಲಿ ಹೊಟೇಲ್‌ಗಳು ಇವೆ ಎಂದರೆ ಸರಿಯಲ್ಲ. ಮುಷ್ಟೂರು ಕ್ರಾಸ್ ಬಳಿ ಕೆನಾಲ್ ಇದೆ ಎಂದರೆ ಸರಿ. ಕೆನಾಲ್‌ನಲ್ಲಿ ಜನರು ಬಟ್ಟೆ ತೊಳೆಯುತ್ತಾರೆ ಎಂದರೆ ಕೆನಾಲ್ ಗ್ರಾಮದಿಂದ ದೂರವಿರುವುದರಿಂದ ಅಲ್ಲಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ದಾಳಿ ಮಾಡಿದ ಸಂದರ್ಭದಲ್ಲಿ ಸಾರ್ವಜನಿಕರು ಯಾರು ಇರಲಿಲ್ಲ. ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ಯಾಗ್ಯೂ ಸಿಕ್ಕಿರುವುದಿಲ್ಲ. ನಾನು ಮತ್ತು ಇಸ್ಮಾಯಿಲ್ ಹಿಡಿಯಲು ಪ್ರಯತ್ನಿಸಿದ್ಯಾಗ್ಯೂ ಸಿಕ್ಕಿರುವುದಿಲ್ಲ. ಮುಷ್ಟೂರು ಕ್ರಾಸ್‌ನಲ್ಲಿ ಯಾವತ್ತು ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಪಂಚನಾಮೆಯನ್ನು ಬೆಳಿಗ್ಗೆ 8-30 ರಿಂದ 10-30 ಗಂಟೆಯವರೆಗೆ ಮಾಡಿರುತ್ತೇವೆ. ಸ್ಥಳದಲ್ಲಿ ಅಕ್ಕಿ ಮತ್ತು ವಾಹನವನ್ನು ಅಮಾನತುಪಡಿಸಿಕೊಂಡಿರುತ್ತೇವೆ. ಅಮಾನತುಪಡಿಸಿಕೊಂಡ ಅಕ್ಕಿಯಲ್ಲಿ ಮಾದರಿಗಾಗಿ ತೆಗೆಯಲು ಕೇವಲ 15 ನಿಮಿಷ ಸಾಕಾಗುತ್ತದೆ ಎಂದರೆ ಸಾಕ್ಷಿಯು 103 ಮೂಟೆಗಳು ಇದ್ದುದ್ದರಿಂದ ಸಮಯ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮಗೆ ಪ್ರಕರಣಗಳನ್ನು ದಾಖಲಿಸುವಂತೆ ಒತ್ತಡ ಇರುತ್ತದೆ ಎಂದರೆ ಸರಿಯಲ್ಲ. ಕಚೇರಿಯ ಅಂಕೆ-ಸಂಖ್ಯೆಗಳಿಗೋಸ್ಕರ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.